4795(5035) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದ 20 ಸಾವಿರ ಜನಸಂಖ್ಯೆ ಇರುವ ಕುಡುಬಿ ಜನಾಂಗದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಜನಾಂಗದ ಸುಧಾರಣೆಗೆ ಸರ್ಕಾರ ಕೈಗೊಂಡ ಕ್ರಮವೇನು?

ಇ) ಈ ಜನಾಂಗವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಿದೆಯೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಡಾ. ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ, ಸಾಲ್ಕೂರು ಗ್ರಾಮದಲ್ಲಿರುವ ಕುಡುಬಿ ಜನಾಂಗದವರಿಗೆ, 1994–95ನೇ ಸಾಲಿಗೆ ಬೆಳ್ಳಿಬೆಳಕು ಯೋಜನೆಯಡಿ ಸೌಲಭ್ಯಗಳನ್ನು ಒದಗಿಸಲಾಗಿದೆ.

1. ವಸತಿ ಸೌಲಭ್ಯ
2. ಸಮೂದಾಯ ಭವನ
3. ಚರಂಡಿ ವ್ಯವಸ್ಥೆ
4. ಸಂಪರ್ಕ ರಸ್ತೆ
5. ವಿದ್ಯುದ್ದೀಕರಣ
6. ಕಿರುನೀರು ಯೋಜನೆ

ಈ ಸೌಲಭ್ಯಗಳ ವೆಚ್ಚಕ್ಕಾಗಿ ರೂ. 12.55 ಲಕ್ಷಗಳನ್ನು ಭರಿಸಲಾಗಿದೆ. 1998–99 ನೇ ಸಾಲಿನ ಕಾರ್ಕಳ ತಾಲ್ಲೂಕಿನ ಹೆಬ್ರಿ ತಾಲ್ಲೂಕ್ ಪಂಚಾಯತಿ ವ್ಯಾಪ್ತಿಯ ಚಾರಾಗ್ರಾಮದಲ್ಲಿರುವ ಕುಡುಬಿ ಜನಾಂಗದವರ ಸುಧಾರಣೆಗಾಗಿ:

1.ವಸತಿ ಸೌಲಭ್ಯಗಳು 17 ಮನೆಗಳ ನಿರ್ಮಾಣ

2. 11 ಮನೆಗಳ ದುರಸ್ತಿ ಕಾಮಗಾರಿಗಾಗಿ ರೂ.4.73 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಈ ಕಾರ್ಯಕ್ರಮಗಳ ಜೊತೆಗೆ ಇಲಾಖಾವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ವಯ ಸೌಲಭ್ಯ ನೀಡಲಾಗುತ್ತದೆ.

3. ವಿದ್ಯಾರ್ಥಿನಿಲಯಗಳ ಪ್ರವೇಶ
4. ವಿದ್ಯಾರ್ಥಿವೇತನ ಶುಲ್ಕ ವಿನಾಯತಿ
5. ಹೆಚ್ಚುವರಿ ಭೋಜನ ವೆಚ್ಚ
6. ಬೆರಳಚ್ಚು, ಶೀಘ್ರಲಿಪಿ ತರಬೇತಿ
7. ಕಾನೂನು ತರಬೇತಿ
8. ಹೊಲಿಗೆ ತರಬೇತಿ
9. ಶ್ಯಕ್ಷಣಿಕ ಪ್ರವೇಶದಲ್ಲಿ ಮೀಸಲಾತಿ
10. ಔದ್ಯೋಗಿಕ ನೇಮಕಾತಿಯಲ್ಲಿ ಮೀಸಲಾತಿ

ಇ)ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ)ಕುಡುಬಿ ಜನಾಂಗದವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ರವರು ಶಿಫಾರಸ್ಸು ಮಾಡಿರುತ್ತಾರೆ. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಕಳುಹಿಸಿದ್ದು, ಆಯೋಗದ ವತಿಯಿಂದ ಶಿಫಾರಸ್ಸು ವರದಿ ನಿರೀಕ್ಷಿಸಿದೆ.

4796(5036) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅದಿರು ತುಂಬಿದ ಲಾರಿಗಳು ನಿಗಧಿಗೊಳಿಸಲಾದ ಮಿತಿಗಿಂತ ಅಧಿಕ ಭಾರದ ಮ್ಯಾಂಗನೀಸ್ ತುಂಬಿರುವುದಕ್ಕೆ ಸರ್ಕಾರ ನಿರ್ಬಂಧ ಹೇರಿ ಅಳತೆ ಮಾಪನ ಮಾಡುವರೇ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದರಿಂದ ಅದಿರು ತುಂಬಿದ ಲಾರಿಗಳು ಮಾರ್ಗ ಬದಲಿಸಿ, ಹೊಸಪೇಟೆಯಿಂದ ತೀರ್ಥಹಳ್ಳಿ ಮಾರ್ಗವಾಗಿ ಹೊಸಂಗಡಿಯಿಂದ ಸಿದ್ಧಾಪುರ ಕಂಡ್ಲೂರು, ಬಸ್ರೂರು – ಮೂರುಕೈಯಾಗಿ ಹಂಗಳೂರು ಮೂಲಕ ಮಂಗಳೂರಿಗೆ ಹೋಗುತ್ತಿದ್ದು ಇದರಿಂದ ಜನರು ಪ್ರತಿಭಟನೆಗೆ ಸಜ್ಜಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಅದಿರು ತುಂಬಿದ ಲಾರಿಗಳಿಂದಾಗಿ ಉಡುಪಿ ಜಿಲ್ಲೆಯ ಬಾರಕೂರು ಸೇತುವೆ ಮುರಿದು ಬಿದ್ದು ಸರ್ಕಾರ ಕೋಟಿಗಟ್ಟಲೆ ಹಣ ವ್ಯಯ ಮಾಡಬೇಕಾಗಿ ಬಂದ ಪ್ರಯುಕ್ತ ಕಂಡ್ಲೂರು ಸೇತುವೆಯನ್ನು ರಕ್ಷಿಸಲು ಸರ್ಕಾರ ಯಾವ ಮುಂಜಾಗರೂಕತಾ ಕ್ರಮ ಕೈಗೊಂಡಿದೆ;